ಕೃಷ್ಣೇಗೌಡ
**ಪಿ.ಡಬ್ಲ್ಯೂ-3**

**ದಿನಾಂಕ 18.09.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟಿ ಸವಾಲು ಪ್ರತಿವಾದಿ ಪರ ಶ್ರೀ ಎ ಎಲ್ ಎಸ್ **ವಕೀಲರವರಿಂದಃ**

ನಾನು ವಿದ್ಯಾಭ್ಯಾಸವನ್ನು ಮಾಡಿರುವುದಿಲ್ಲ. ಈ ದಿನ ನನ್ನನ್ನು ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ವಾದಿ ಕರೆದುಕೊಂಡು ಬಂದಿರುತ್ತಾರೆ. ನಾನು ಜಮೀನಿನ ವ್ಯವಹಾರಕ್ಕೆ ಸೇರಿರುತ್ತೇನೆ, ನನಗೆ ಸರ್ವೆ ನಂಬರ, ವಿಸ್ತೀರ್ಣ ಗೊತ್ತಿಲ್ಲ. 1 ನೇ ಪ್ರತಿವಾದಿ ದಾವಾ ಸ್ವತ್ತನ್ನು ಮಾರಾಟ ಮಾಡಿರುವುದಾಗಿ ನನಗೆ ತಿಳಿಸಿರುತ್ತಾರೆ. ನನಗೆ ಸುಮಾರು 25 ವರ್ಷಗಳಿಂದಲೂ 1 ನೇ ಪ್ರತಿವಾದಿ ಗೊತ್ತು. ಜಮೀನನ್ನು ಮಾರಾಟ ಮಾಡುತ್ತಿರುವುದಾಗಿ ಸದರಿ ವ್ಯವಹಾರ ಮಾಡಲು 1 ನೇ ಪ್ರತಿವಾದಿ ನನ್ನನ್ನು ಕರೆದುಕೊಂಡು ಹೋಗಿರುತ್ತಾರೆ, ಜಮೀನಿನ ವ್ಯವಹಾರ ನನಗೆ ಈಗ ನೆನಪಿಲ್ಲ.

2. 1 ನೇ ಪ್ರತಿವಾದಿಯ ಹೆಂಡತಿ ಮತ್ತು ಮಕ್ಕಳ ಹೆಸರು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಗ್ರಾಮ ಪಂಚಾಯತಿ ಸದಸ್ಯರಾಗಿದ್ದು, ಆರ್ಥಿಕವಾಗಿ ಚೆನ್ನಾಗಿದ್ದಾರೆ ಎಂದರೆ ಸರಿ. ಜಮೀನನ್ನು ಮಾರಾಟ ಮಾಡು ದರದು ಇರಲಿಲ್ಲ ಎಂದರೆ ಸಾಕ್ಷಿ 1 ನೇ ಪ್ರತಿವಾದಿ ನನ್ನನ್ನು ಕರಾರು ಪತ್ರಕ್ಕೆ ಸಾಕ್ಷಿದಾರನಾಗಿ ಸಹಿ ಮಾಡಲು ಕರೆದರು, ನಾನು ಹೋಗಿ ಸಹಿ ಮಾಡಿರುತ್ತೇನೆ, ಸದರಿ ಸಮಯದಲ್ಲಿ ನನ್ನೊಂದಿಗೆ ಯಾರು ಯಾರು ಇದ್ದರು ಎಂದು ನನಗೆ ನೆನಪಿಲ್ಲ. ಕ್ರಯದ ಕರಾರು ಪತ್ರದ ವಿಷಯಗಳು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿ ಸಹಿ ಮಾಡುವಾಗ ವಿಚಾರಗಳನ್ನು ಓದಿ ಹೇಳಿರುತ್ತಾರೆ, ನಾನು ಸಹಿ ಮಾಡಿರುತ್ತೇನೆ. ಶಶಿಕುಮಾರ ಎಂಬುವವರು ಕರಾರು ಪತ್ರದಲ್ಲಿರುವ ವಿಷಯಗಳನ್ನು ನನಗೆ ಓದಿ ತಿಳಿಸಿರುತ್ತಾರೆ.

3. ಜಮೀನಿನ ವ್ಯವಹಾರವು ರೂ 4,20,000/- ಗಳಿಗೆ ಆಗಿರುತ್ತದೆ. ಜಮೀನಿನ ವ್ಯಾಪಾರವು ಶಶಿಕುಮಾರವರ ಕಚೇರಿಯಲ್ಲಿ ಆಗಿರುತ್ತದೆ. ಜಮೀನಿನ ಮಾತುಕತೆಯಾದಾಗಲೇ ಪತ್ರವನ್ನು ತಯಾರು ಮಾಡಿರುತ್ತಾರೆ. ಪತ್ರ ವ್ಯವಹಾರ ಮಾಡುವಾಗ ನನ್ನನ್ನು ಮತ್ತು ಶಶಿಕುಮಾರವರನ್ನು ಹೊರತುಪಡಿಸಿ ಬೇರೆ ಯಾರು ಇದ್ದರು ಎಂದು ನನಗೆ ಈಗ ನೆನಪಿಲ್ಲ. ಪತ್ರ ವ್ಯವಹಾರದ ದಿನ 500 ಮುಖ ಬೆಲೆಯ ನೋಟುಗಳನ್ನು ರೂ 4,00,000/- ವಾದಿ

ಪ್ರತಿವಾದಿಗೆ ಕೊಟ್ಟಿರುತ್ತಾರೆ. ಹಣವನ್ನು ನೊಂದಣಿ ಕಚೇರಿಯಲ್ಲಿ ಕೊಟ್ಟಿರುತ್ತಾರೆ. 2 ರಿಂದ 4 ನೇ ಪ್ರತಿವಾದಿಯರಿಗೆ ಹಣ ಕೊಟ್ಟಿರುವ ವಿಚಾರ ಗೊತ್ತಿಲ್ಲ ಎಂದರೆ ಸರಿಯಲ್ಲ. ರೂ 4,00,000/- ಹಣವನ್ನು ವಾದಿಯ ತಂದೆ ವಾದಿಗೆ ಕೊಟ್ಟಿರುತ್ತಾರೆ, ವಾದಿ ಪ್ರತಿವಾದಿಗೆ ಕೊಟ್ಟಿರುತ್ತಾರೆ. ನಾನು ಈ ದಿನ ವಿಚಾರಣೆಗೆ ಬರುವ ವಿಚಾರವನ್ನು 1 ನೇ ಪ್ರತಿವಾದಿಗೆ ತಿಳಿಸಿರುವುದಿಲ್ಲ. ನ್ಯಾಯಾಲಯಕ್ಕೆ ಬಂದಿರುವ ವಿಚಾರವನ್ನು 1 ನೇ ಪ್ರತಿವಾದಿ ತಿಳಿಸಲು ತೊಂದರೆ ಇತ್ತಾ ಎಂದರೆ 1 ನೇ ಪ್ರತಿವಾದಿ ನನಗೆ ಸಿಕ್ಕಿರುವುದಿಲ್ಲ, ನಾನು ತಿಳಿಸಿರುವುದಿಲ್ಲ ಎಂದು ನುಡಿದರು.

4. ಕ್ರಯದ ಕರಾರು ಪತ್ರದ ದಿನದಂದೇ ಒಟ್ಟು ಕ್ರಯದ ಮೊತ್ತವನ್ನು ಕೊಟ್ಟು ಕ್ರಯಪತ್ರ ಮಾಡಿಸಿಕೊಳ್ಳಲು ತೊಂದೆರೆ ಇತ್ತಾ ಎಂದರೆ ಸಾಕ್ಷಿ ದಾಖಲೆಗಳನ್ನು ಸರಿ ಮಾಡಲು 1 ನೇ ಪ್ರತಿವಾದಿ ಸಮಯ ಕೇಳಿರುತ್ತಾರೆ, ಆದ್ದರಿಂದ ಕ್ರಯಪತ್ರ ಮಾಡಿಸಿರುವುದಿಲ್ಲ. ಯಾವ ದಾಖಲೆಗಳನ್ನು ಮಾಡಲು ಸಮಯ ಕೇಳಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಖುದ್ದು ಜಮೀನನ್ನು ನೋಡಿರುವುದಿಲ, ಕ್ರಯದ ಕರಾರು ಪತ್ರದ ಒಕ್ಕಣಿಕೆಗಳನ್ನು ತಿಳಿದುಕೊಂಡಿರುತ್ತೀರಾ ಎಂದರೆ ಶಶಿಕುಮಾರ ನನಗೆ ಓದಿ ತಿಳಿಸಿರುತ್ತಾರೆ ಎಂದು ನುಡಿದರು.

ಕರಾರು ಪತ್ರಕ್ಕೆ ನನ್ನನ್ನು ಹೊರತುಪಡಿಸಿ ಬೇರೆ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಈಗ ನೆನಪಿಲ್ಲ. ದಾವಾ ಸ್ವತ್ತನ್ನು ಲಪಟಾಯಿಸುವ ಉದ್ದೇಶದಿಂದ ನನ್ನನ್ನು ವಾದಿ ಸಾಕ್ಷಿದಾರನಾಗಿ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ
ಮುಂದುವರಿದ ವಾದಿ ಪರ ವಿಚಾರಣೆ ಇಲ್ಲ ಎಂದು ನುಡಿದರು.

**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.**

**ಸಾ.ಓ.ಹೇ.ಸ.ಇದೆ.**

2 ನೇ ಅಪರ ಸಿವಿಲ್ ಜೆಡ್ಜ್ ಮತ್ತು ಜೆ.ಎಂ.ಎಫ್.ಸಿ
ಪಾಂಡವಪುರ